**ದಿನಾಂಕ 16.11.2013 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 133, 1ನೇ ಮಹಡಿ ವಿಕಾಸ ಸೌಧ, ಬೆಂಗಳೂರಿನಲ್ಲಿ ನೂತನ ಬೋಧಕ ಆಸ್ಪತ್ರೆಗೆ ಕ್ಯಾಂಟೀನ್ ಸೇವೆಯನ್ನು ಪಡೆಯುವ ಸಂಬಂಧ ಜರುಗಿದ ಖರೀದಿ ಸಮಿತಿ ಸಭೆಯ ಸಭಾ ನಡುವಳಿಗಳು.**

**ಖರೀದಿ ಸಮಿತಿ ಸಭೆಯಲ್ಲಿ ಹಾಜರಿದ್ದ ಸದಸ್ಯರು**

| ಕ್ರಮ ಸಂಖ್ಯೆ | ಪದನಾಮ | | ಸಹಿ |
|---|---|---|---|
| 1 | ಶ್ರೀಮತಿ ವಿ.ರಶ್ಮಿ, (ಭಾ.ಆ.ಸೇ)<br>ಸರ್ಕಾರದ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>(ವೈದ್ಯಕೀಯ ಶಿಕ್ಷಣ), ವಿಕಾಸ ಸೌಧ,<br>ಬೆಂಗಳೂರು. | ಅಧ್ಯಕ್ಷರು | 16/11/13 |
| 2 | ಡಾ. ಬಸವರಾಜ್ ಪೀರಾಪುರ್,<br>ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು. | ಉಪಾಧ್ಯಕ್ಷರು | |
| 3 | ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಪ್ರತಿನಿಧಿಗಳು<br>ಬೆಂಗಳೂರು | ಸದಸ್ಯರು | |
| 4 | ಡಾ. ಶ್ರೀ ನಿವಾಸ್‌ಮೂರ್ತಿ,<br>ವೈದ್ಯಕೀಯ ಅಧೀಕ್ಷಕರು,<br>ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು | ಸದಸ್ಯರು | |
| 5 | ಶ್ರೀ .ಟಿ. ನಾಗೇಶ್,<br>ಪ್ರಭಾರಿ ಆಡಳಿತಾಧಿಕಾರಿಗಳು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು | ಸದಸ್ಯರು | |
| 6 | ಶ್ರೀ ಸೈಯದ್ ಜೀಯಾವುದ್ದೀನ್,<br>ಆರ್ಥಿಕ ಸಲಹೆಗಾರರು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು | ಸದಸ್ಯ ಕಾರ್ಯದರ್ಶಿ | |

ಮೊದಲಿಗೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ರಿಮ್ಸ್ ನೂತನ ಬೋಧಕ ಆಸ್ಪತ್ರೆ ಕಟ್ಟಡದಲ್ಲಿ ಕ್ಯಾಂಟೀನ್ ಪ್ರಾರಂಭಿಸಲು ಕರೆದ ಟೆಂಡರ್‌ನಲ್ಲಿ ಒಟ್ಟು ಎರಡು ಟೆಂಡರ್‌ದಾರರಾದ 1) ಮೆ॥ ಮಾರುತಿ ಏಜನ್ಸಿಸ್, ರಾಯಚೂರು ಮತ್ತು 2) ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್, ಬೆಂಗಳೂರು ಇವರು ಭಾಗವಹಿಸಿದ್ದರು.

ಟೆಂಡರ್‌ದಾರರು ಸಲ್ಲಿಸಿದ ದರಪಟ್ಟಿಯಲ್ಲಿ ಊಟ ಮತ್ತು ಉಪಹಾರಕ್ಕೆ ಸಂಬಂಧಿಸಿದಂತೆ ನಮೂದಿಸಿರುವ ದರಗಳನ್ನು ಹಾಗೂ ಪ್ರತಿ ತಿಂಗಳ ಕ್ಯಾಂಟೀನ್ ಬಾಡಿಗೆ ದರಗಳನ್ನು ಖರೀಧಿ ಸಮಿತಿ ಸಭೆಯಲ್ಲಿ ಓದಲಾಯಿತು. ಮತ್ತು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಯಚೂರು ಇವರು ಕ್ಯಾಂಟೀನ್ ಬಾಡಿಗೆ ರೂ. 45,687/–ನಿಗದಿ ಪಡಿಸಿ ಸಲ್ಲಿಸಿದ ಪತ್ರವನ್ನು ಪರಿಶೀಲಿಸಲಾಯಿತು.

ಕ್ಯಾಂಟೀನ್ ಊಟ ಮತ್ತು ಉಪಾಹಾರಕ್ಕೆ ಸಂಬಂಧಿಸಿದ ಎಲ್ಲಾ ಪದಾರ್ಥಗಳಿಗೆ ಮೆ॥ ಮಾರುತಿ ಏಜನ್ಸಿಸ್, ರಾಯಚೂರು ಇವರು ಅತಿ ಕಡಿಮೆ ದರಗಳನ್ನು (ಎಲ್ – 1) ಸೂಚಿಸಿದ್ದು, ಮತ್ತು ಕ್ಯಾಂಟೀನ್‌ನ ಬಾಡಿಗೆಯಲ್ಲಿಯೂ ಸಹ ಮೆ॥ ಮಾರುತಿ ಏಜನ್ಸಿಸ್, ರಾಯಚೂರು ಇವರು ಅತಿ ಹೆಚ್ಚಿನ ದರ ರೂ. 45,500/–ಗಳನ್ನು ಸೂಚಿಸಿರುತ್ತಾರೆ. ಚರ್ಚೆಯ ನಂತರ ಖರೀದಿ ಸಮಿತಿಯು ಮೆ॥ ಮಾರುತಿ ಏಜನ್ಸಿಸ್, ರಾಯಚೂರು ಇವರು ಸೂಚಿಸಿದ ಕ್ಯಾಂಟಿನ ಬಾಡಿಗೆಯನ್ನು ರೂ. 45,500/–ಗಳನ್ನು ಪ್ರತಿ ತಿಂಗಳು ದರಕ್ಕೆ ಖರೀದಿ ಸಮಿತಿಯು ಅನುಮೋದನೆ ನೀಡಿತು. ಹಾಗೂ ಟೆಂಡರ್ ಬಿಡ್‌ನಲ್ಲಿ ನಮೂದಿಸಿದ ಷರತ್ತುಗಳಂತೆ ಕ್ಯಾಂಟೀನಿಗೆ ಪ್ರತ್ಯೇಕ ವಿದ್ಯುತ್ ಮೀಟರ್ ಅಳವಡಿಸಲು ಹಾಗೂ ನೀರಿನ ಸಂಪರ್ಕವನ್ನು ಸಹ ಪ್ರತ್ಯೇಕವಾಗಿ ಪಡೆದು ಅವುಗಳ ಪ್ರತಿ ತಿಂಗಳಿನ ಬಿಲ್ಲಿನ ಮೊತ್ತವನ್ನು ಟೆಂಡರ್‌ದಾರರೇ ಭರಿಸುವ ಷರತ್ತಿನೊಂದಿಗೆ ಅನುಮೋದನ ನೀಡಲಾಯಿತು.

ಹಾಗೂ ಉಟ ಮತ್ತು ಉಪಾಹಾರಕ್ಕೆ ಸೂಚಿಸಿರುವ ಮೆ॥ ಮಾರುತಿ ಏಜನ್ಸಿಸ್, ರಾಯಚೂರು ಇವರು ಎಲ್ – 1 ಟೆಂಡರ್ ದರಗಳನ್ನು ಖರೀದಿ ಸಮಿತಿಯು ಊಟಗಳಿಗೆ ಸಂಬಂಧಿಸಿದಂತೆ ನೀಡಿದ ದರಗಳು ಹೆಚ್ಚಾಗಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ದರಗಳನ್ನು ಪರಾಮರ್ಶಿಸಿ ದರಗಳನ್ನು ಕಡಿಮೆ ಮಾಡುವ ಷರತ್ತಿನ ಮೇಲೆ — ನಮೂದಿಸಲಾದ ದರಗಳಿಗೆ ಖರೀದಿ ಸಮಿತಿಯ ಅನುಮೋದನೆ ನೀಡಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | | | |
|---|---|---|---|
| ಶ್ರೀ ಸೈಯದ್ ಜೀಯಾವುದ್ದೀನ್,<br>ಆರ್ಥಿಕ ಸಲಹೆಗಾರರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಖರೀದಿ ಸಮಿತಿ ಸಭೆ | ಡಾ.ಬಸವರಾಜ್ ಪೀರಾಪುರ್<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಉಪಾಧ್ಯಕ್ಷರು,<br>ರಿಮ್ಸ್ ಖರೀದಿ ಸಮಿತಿ ಸಭೆ,<br>ರಾಯಚೂರು | ಡಾ.ಜಿ.ಎಸ್. ವೆಂಕಟೇಶ್<br>ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ<br>ಹಾಗೂ ಸದಸ್ಯರು,<br>ರಿಮ್ಸ್ ಖರೀದಿ ಸಮಿತಿ ಸಭೆ,<br>ರಾಯಚೂರು | 16/11/13<br>ವಿ. ರಶ್ಮಿ, ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಅಧ್ಯಕ್ಷರು, ರಿಮ್ಸ್ ಖರೀದಿ ಸಮಿತಿ<br>ಸಭೆ, ರಾಯಚೂರು |